**ಓಎಸ್ ನಂಃ 10/2009**

**ಡಿಡಬ್ಲೂಃ 1**

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್.ಎ.ಕೆ. ವಕೀಲರಿಂದ

ನಾನು ವಾದಿಗೆ ಹಣ ನೀಡಬೇಕೆಂದು ಎಸಿ ಸೇಡಂ ಅವರ ಬಳಿ ಯಾವುದೇ ಛಾಪಾ ಕಾಗದದ ಮೇಲೆ ಸಹಿ ಮಾಡಿ ಕೊಟ್ಟಿಲ್ಲ. ಎಸಿ ಸೇಡಂ ಅವರು ಹಣವನ್ನು ಕೇವಲ ವಾದಿಯ ಹೆಸರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಮ್ಮಿಬ್ಬರ ಹೆಸರಿಗೆ ಬರೆದು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ನಮ್ಮಿಬ್ಬರ ಹೆಸರಿಗೆ ಚಕ್ ಕೊಟ್ಟಿದ್ದಾರೆಂದು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಿಪಿ-17ರ ಪ್ರಕಾರ ಸರಕಾರದವರು ಕೇವಲ ವಾದಿಗೆ ಹಣ ನೀಡಬೇಕೆಂದು ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-17ರ ಪ್ರಕಾರ ಸರಕಾರದವರು ಕೇವಲ ವಾದಿಗೆ ಹಣ ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಪಿ-18ನ್ನು ತೋರಿಸಿ ಸದರಿ ಕರಾರು ಪತ್ರದ ಮೇಲೆ ನಿಮ್ಮ ಸಹಿ ಇದೆ ಎಂದು ಕೇಳಿದಾಗ ಸಾಕ್ಷಿ ಸಹಿ ನನ್ನದೇ ಇರುತ್ತದೆ ಎಂದು ನುಡಿದಿರುತ್ತಾರೆ. ನಿಪಿ-18ರಲ್ಲಿ ನಾನು ವಾದಿಗೆ ಹಣ ಕೊಡಲು ನನ್ನ ತಕರಾರು ಇಲ್ಲ ಮತ್ತು ನಾನು ಅದರ ಕುರಿತು ಯಾವುದೇ ಪ್ರಕರಣ ಮಾಡುವುದಿಲ್ಲ ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದ ನಾನು ಬೇರೆ ವಿಷಯದಲ್ಲಿ ಅದನ್ನು ಬರೆದಿದ್ದೇನೆ ಎಂದು ನುಡಿಯುತ್ತಾರೆ. ಸರಕಾರದವರು ನೀವು ಪ್ರಮಾಣ ಪತ್ರ ನೀಡದಿದ್ದರೆ ಹಣ ವಾದಿಗೆ ನೀಡುತ್ತಿರಲಿಲ್ಲ ಎಂದರೆ ನಾನು ಯಾವುದೇ ಪ್ರಮಾಣ ಪತ್ರ ಸರಕಾರಕ್ಕೆ ನೀಡಿಲ್ಲ ಎಂದು ನುಡಿಯತ್ತಾರೆ. ಸಾಕ್ಷಿ ಮುಂದುವರಿದು ನಿಪಿ-18 ದಾಖಲೆಯನ್ನು ನಾನು ವಾದಿಗೆ ಆತ ದಾವಾ ಆಸ್ತಿಯನ್ನು ನೋಂದಾಯಿಸಿಕೊಡುತ್ತೇನೆಂದು ಹೇಳಿದ ಕಾರಣ ಬರೆದು ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ವಾದಿಗೆ ಒಬ್ಬನಿಗೇ ಹಣ ಕೊಟ್ಟ ಬಗ್ಗೆ ನಾನು ಸರಕಾರದ ಬಳಿ ಯಾವುದೇ ತಕರಾರು ಮಾಡಿಲ್ಲ. ಸದರಿ ತಕರಾರು ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಮ್ಯುಟೇಷನ್ ನಂಬರ್ 25/1993-94ನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾನು ನನ್ನ ವಕೀಲರಿಗೆ ನೀಡಿದ್ದೇನೆಂದು ನುಡಿಯುತ್ತಾರೆ. ನೀವೇ ಖೊಟ್ಟಿಯಾಗಿ ಮ್ಯುಟೇಷನ್ ನಂಬರ್ 25/1993-94ನ್ನು ಸೃಷ್ಟಿಸಿದ ಕಾರಣ ನೀವು ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಾದಿ ಎಂದಿಗೂ ನಿಮಗೆ ಯಾವುದೇ ಕರಾರುಪತ್ರವನ್ನು ಬರೆದುಕೊಟ್ಟಿಲ್ಲ ಮತ್ತು ನಿಮ್ಮ ಯಾವುದೇ ಆಸ್ತಿ ರಸ್ತೆಯಲ್ಲಿ ಹೋಗಿಲ್ಲ ಎಂದರೆ ಸರಿಯಲ್ಲ.

ನೀವು ಎಸಿ ಸೇಡಂ ಇವರ ಕಛೇರಿಯಿಂದ ಸ್ಟ್ಯಾಂಪ್ ಕಾಗದವನ್ನು ತೆಗೆದು ಇಟ್ಟು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಈ ದಾವೆಯಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.